For More Job News Visit: www.kpscvaani.com


# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadbgulb@gmail.com

Website: hkrdb.kar.nic.in


ಸಂ: ಕ.ಕ.ಪ್ರ.ಅ.ಮಂ/ಸಿಬ್ಬಂದಿ/15/2019.20

ದಿನಾಂಕ: 23.06.2021.

**ಪ್ರಕಟಣೆ**

ವಿಷಯ:– ಕ.ಕ.ಪ್ರ.ಅ.ಮಂಡಳಿ ಕಲಬುರಗಿ ಕಾರ್ಯಲಯದಲ್ಲಿ ಮಂಜೂರಾಗಿ ತೆರವಾಗಿರುವ ಹುದ್ದೆಗಳಿಗೆದುರಾಗಿ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನುಹೊರಗುತ್ತಿಗೆ/ಗೌರವಧನ ಆಧಾರದ ಮೇಲೆ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು.

*~*~*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಕಾರ್ಯಲಯದಲ್ಲಿ ಮಂಜೂರಾಗಿ ತೆರವಾಗಿರುವ ಹುದ್ದೆಗಳಿಗೆದುರಾಗಿ 01 ಕಾರ್ಯನಿರ್ವಾಹಕ ಅಭಿಯಂತರರು, 05 ಸಹಾಯಕ ಅಭಿಯಂತರರು, 02 ಜ್ಯೂನಿಯರ್ ಪ್ರೋಗ್ರಾಮರ್ ಹಾಗೂ 02 ಕಂಪ್ಯೂಟರ್ ಆಪರೇಟರ್‌ಗಳ ಅವಶ್ಯಕತೆ ಇರುತ್ತದೆ. ಅದರಂತೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳಿಗೆ ಹೊರಗುತ್ತಿಗೆ/ಗೌರವಧನದ ಆಧಾರದ ಮೇಲೆ ಪಡೆದು ಕೊಳ್ಳಲಾಗುವುದು. ಸದರಿ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಹುದ್ದೆ | ಸಂಖ್ಯೆ | ಸಾಮರ್ಥ್ಯ |
|---|---|---|---|
| 1] | ಕಾರ್ಯನಿರ್ವಾಹಕ ಅಭಿಯಂತರರು | 01 | PWD, PRED, MI, RWS, KUWS&DB & KRIDL ಇಲಾಖೆಗಳ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು |
| 2] | ಸಹಾಯಕ ಅಭಿಯಂತರರು | 05 | PWD, PRED, MI, RWS, KUWS&DB & KRIDL ಇಲಾಖೆಗಳ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಕಿರಿಯ/ಸಹಾಯಕ ಅಭಿಯಂತರರು |
| 3] | ಜ್ಯೂನಿಯರ್ ಪ್ರೋಗ್ರಾಮರ್ | 02 | MCA, MSc(CS)<br>HTML,C#,ASP.NET, MSSQL, (02 years experience)<br>(ಗೌರವ ಧನ ರೂ. 15,000.00) |
| 4] | ಕಂಪ್ಯೂಟರ್ ಆಪರೇಟರ್ | 02 | 1] ಯಾವುದೇ ಪದವಿ,<br>2] ಕಡ್ಡಾಯವಾಗಿ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್<br>3] ಕಡ್ಡಾಯವಾಗಿ ಯಾವುದೇ ಸರಕಾರದ ಕಚೇರಿಗಳಲ್ಲಿ ಒಂದು ವರ್ಷ ಕರ್ತವ್ಯ ನಿರ್ವಹಿಸಿರಬೇಕು (ಸಂಭಾವನೆ ಕನಿಷ್ಟ ವೇತನ ಕಾಯ್ದೆ ಅನ್ವಯ) |

For More Job News Visit: www.kpscvaani.com

ಸದರಿ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಈ ಕೆಳಗಿನಂತೆ ಷರತ್ತುಗಳ ಅನ್ವಯ ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲಾಗುತ್ತದೆ.

1] ನಿವೃತ್ತ ಅಧಿಕಾರಿ/ಸಿಬ್ಬಂದಿಯವರ ವಯಸ್ಸು 65 ವರ್ಷ ಮೀರಿರಬಾರದು.

2] ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ತಮ್ಮ ಪಿಂಚಣಿ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

3] ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಗರಿಷ್ಠ ಒಂದು ವರ್ಷದ ಅವಧಿಗೆ ಮಾತ್ರ ಪಡೆದುಕೊಳ್ಳಲಾಗುವುದು.

4] ನಿವೃತ್ತ ಅಧಿಕಾರಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

5] ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಅವರು ನೀಡುವ ಸೇವೆಯ ಆಧಾರದ ಮೇಲೆ ಅವರ ಸೇವೆಯನ್ನು ಮುಂದುವರೆಸುವ ಹಾಗೂ ಸದರಿಯವರ ಕಾರ್ಯಕ್ಷಮತೆಯಲ್ಲಿ ಸೂಕ್ತತೆ ಇಲ್ಲದಿದ್ದರೆ ಅವರ ಸೇವೆಯನ್ನು ರದ್ದುಪಡಿಸುವ ಅಧಿಕಾರ ಪ್ರಾಧಿಕಾರಿಗಳಿಗೆ ಇರುತ್ತದೆ.

ಆದ್ದರಿಂದ ಆಸಕ್ತಿಯುಳ್ಳ ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಹಾಗೂ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಅವಶ್ಯಕ ದಾಖಲಾತಿಗಳೊಂದಿಗೆ ಈ ಕಾರ್ಯಾಲಯದಲ್ಲಿ ಅರ್ಜಿ ಸಲ್ಲಿಸಲು **ದಿನಾಂಕ: 03.07.2021 ರಂದು ಸಾಯಂಕಾಲ 5.30 ರೊಳಗೆ (ರಜಾದಿನ ಹೊರತುಪಡಿಸಿ)** ಕಛೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ. **ದಿನಾಂಕ 06.07.2021 ರಂದು ಬೆಳಿಗ್ಗೆ 10.00 ಗಂಟೆಗೆ** ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಹಾಗೂ ಅಭ್ಯರ್ಥಿಗಳ **ರವರ ದಾಖಲಾತಿಗಳ ಪರಿಶೀಲನೆ ಹಾಗೂ ಸಂದರ್ಶನ ಮತ್ತು ದಿನಾಂಕ 07.07.2021 ರಂದು ಬೆಳಿಗ್ಗೆ 10.00 ಗಂಟೆಗೆ ಕಂಪ್ಯೂಟರ ಆಪರೇಟರ್ ರವರ ಲಿಖಿತ ಪರೀಕ್ಷೆ** ಮಂಡಳಿಯ ಕಾರ್ಯಾಲಯದಲ್ಲಿ ನಿಗದಿಪಡಿಸಲಾಗಿರುತ್ತದೆ.ಹೆಚ್ಚಿನ ವಿವರಗಳನ್ನು ಕಚೇರಿಯ ಕೆಲಸದ ದಿನಗಳಲ್ಲಿ ಸಂಪರ್ಕಿಸಿ, ಪಡೆದುಕೊಳ್ಳಬಹುದಾಗಿದೆ.

ಕಾರ್ಯದರ್ಶಿಗಳು

ಕ ಕ ಪ್ರ ಅ ಮಂಡಳಿ ಕಲಬುರಗಿ